**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ26-06-2025**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ವೈ ಕೆ ವಕೀಲರಿಂದ**

ಸಿದ್ದಯ್ಯ ರವರ 2 ನೇ ಹೆಂಡತಿ ನಮ್ಮ ತಾಯಿ ಕೆಂಚಮ್ಮ ಎಂದು ಇರುತ್ತದೆ. ನಾನು , 3 ಮತ್ತು 4 ನೇ ಅರ್ಜಿದಾರರು 2 ನೇ ಅರ್ಜಿದಾರರ ಮಕ್ಕಳು ಇರುತ್ತೇವೆ. ಎದುರುದಾರರು 1 ರಿಂದ 4 ನನ್ನ ತಂದೆಯ ಮೊದಲ ಹೆಂಡತಿಯಾದ ತಿಮ್ಮಮ್ಮರವರ ಮಕ್ಕಳು ಇರುತ್ತಾರೆ. ನಾವಿಬ್ಬರೂ ಸುಮಾರು 30 ವರ್ಷದಿಂದ ಬೇರೆ ಬೇರೆ ವಾಸ ಇರುತ್ತೇವೆ. ನನ್ನ ಸರ್ಕಾರಿ ದಾಖಲೆಗಳಲ್ಲಿ ನನ್ನ ತಂದೆ ಸಿದ್ದಯ್ಯ ಮತ್ತು ತಾಯಿ ಕೆಂಚಮ್ಮ ಎಂದು ನಮೂದಿಸಿರುತ್ತೇವೆ. ತಿಮ್ಮಮ್ಮ ರವರ ಹೆಸರು ನಮೂದಿಸಿರುವುದಿಲ್ಲ.

ತಿಮ್ಮಮ್ಮರವರು 05.10.1974 ರಲ್ಲಿ ಮರಣ ಹೊಂದಿರುತ್ತಾರೆ. 2 ನೇ ಅರ್ಜಿದಾರರು ತಿಮ್ಮಮ್ಮ ರವರ ಮರಣ ದಿನಾಂಕವನ್ನು ಚೀಟಿಯಲ್ಲಿ ಬರೆದಿಟ್ಟಿದ್ದರಿಂದ ದಿನಾಂಕ ಗೊತ್ತಿರುತ್ತದೆ. ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕೃಷಿ ಇಲಾಖೆಯಿಂದ ಸೌಲಭ್ಯ ಪಡೆಯುವುದರಿಂದ ಮತ್ತು ನನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತಿಮ್ಮಮ್ಮರವರ ಮರಣ ಪತ್ರ ಬೇಕಾಗಿರುತ್ತದೆ. ತಿಮ್ಮಮ್ಮರವರು ನಮ್ಮ ಕುಟುಂಬಕ್ಕೆ ಸಂಬಂಧ ಪಡದೇ ಇರುವುದರಿಂದ ಮತ್ತು 30 ವರ್ಷಗಳಿಂದ ಬೇರೆ ಇರುವುದರಿಂದ ಯಾವುದೇ ಸೌಲಭ್ಯಕ್ಕಾಗಿ ಅವರ ಮರಣ ಪ್ರಮಾಣ ಪತ್ರ ಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾವೇ ಮರಣ ದಿನಾಂಕವನ್ನು ಸೃಷ್ಟಿ ಮಾಡಿಕೊಂಡು ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರ ವಿರುದ್ದ ವಿಭಾಗ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಅದು ವಿಚಾರಣೆ ಹಂತದಲ್ಲಿ ಇದೆ ಎಂದರೆ ಸರಿ. ತಿಮ್ಮಮ್ಮ ರವರ ಮರಣ ಪ್ರಮಾಣ ಪತ್ರವನ್ನು ದುರುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ಈ ಸುಳ್ಳು ಅರ್ಜಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ತಿಮ್ಮಮ್ಮ ರವರ ಮರಣ ಪ್ರಮಾಣ ಪತ್ರವನ್ನು ನಾನು ವೈಯಕ್ತಿಕವಾಗಿ ಪಡೆಯವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಮಾತ್ರ ತಿಮ್ಮಮ್ಮ ರವರ ವಾರಸುದಾರರಾಗಿದ್ದು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**